# ಶ್ರೀ ರಾಮಮಾನಸ ಸ್ತೋತ್ರಮ್ – ೨

**ಜಲಧರ - ನಿಭಗಾತ್ರೇ ಸ್ವರ್ಣಯಜ್ಞೋಪವೀತಂ ।**
**ನವಗುಣ-ಗಣಿತಂ ತತ್ ಪಾವನಂ ಪಾವನಾನಾಮ್ ॥**
**ತಡಿದಿವ ಖಲು ಪೀತಂ ವಸ್ತ್ರಮಚ್ಯೋತ್ತರೀಯಂ ।**
**ಜಯ ರಘುವರ ದಾಸ್ಯೇ ತ್ವಂ ಗೃಹಾಣ ಸ್ವಮೇವ ॥ ೪ ॥**

ಹೇ ರಘುವರನೆ, ಸ್ವರ್ಣದ ಮೂರು ತಂತುಗಳ ಯಜ್ಞೋಪವೀತವನ್ನು ನೀರಿನಿಂದ ಕೂಡಿದ ಮೋಡದಂತಿರುವ ನಿನ್ನ ಶ್ಯಾಮವರ್ಣದ ಕೊರಳಿಗೆ ಹಾಕುತ್ತಿರುವೆನು. ಮಿಂಚಿನಂತೆ ಬಹಳ ಪ್ರಕಾಶಮಾನವಾದ ಹಳದಿಯ ವಸ್ತ್ರವನ್ನು ಉತ್ತರೀಯವಾಗಿ ಅರ್ಪಿಸುತ್ತಿದ್ದೇನೆ. ॥ ೪॥

**ಕಿರೀಟ-ಹಾರಾಂಗದ-ಚಾರು-ಮೇಖಲಾ ।**
**ಮುದ್ರಾದ್ಯನೇಕಾಕೃತಿ-ಭೂಷಣಾನಿ ॥**
**ಮಹೀ-ಸುಗಂಧಂ ಪ್ರಗೃಹಾಣ ಚಾಕ್ಷತಾನ್ ।**
**ಪುಷ್ಪೇಷು ಖಂ ರಾಮ ಮಯಾ ಸಮರ್ಪಿತಮ್ ॥ ೫ ॥**

ಹೇ ಶ್ರೀರಾಮ, ಕಿರೀಟ, ಹಾರ, ಅಂಗದ (ಭುಜದ ಆಭರಣ), ಸುಂದರ ನಡುಪಟ್ಟಿ, ಉಂಗುರ, ಮುಂತಾದ ಅನೇಕ ಆಭರಣಗಳು, ಸುಗಂಧ ಮತ್ತು ಅಕ್ಷತೆ, ಆಕಾಶರೂಪಿ ಹೂವುಗಳನ್ನು ಅರ್ಪಿಸುತ್ತಿದ್ದೇನೆ, ಅವುಗಳನ್ನು ಸ್ವೀಕರಿಸು. ॥ ೫ ॥

**ರಾಷ್ಟ್ರೋಪಪ್ಲವನಾಶಕಂ ಸುಲಲಿತಂ ವಾಯುಂ ಸುಧೂಪಂ ತಥಾ ।**
**ರಾಮೇಮಂ ಪರಮಂ ದಿವಾಕರಮಹೋತೇಜೋಮಯಿ ದೀಪಿಕಾಂ ॥**
**ರಾಜೀವಾರುಣಲೋಚನಾಮೃತಮಯಂ ಷಟ್‌ಸ್ವಾದುಲೋಲ್ಯೈರಸ್ತೈಃ ।**
**ಸಂಪನ್ನಂ ವಿನಿವೇದಿತಂ ಸುಮನಸಾ ನೈವೇದ್ಯಮಂಗೀಕುರು ॥ ೬ ॥**

ಹೇ ರಾಮ, ರಾಷ್ಟ್ರಕ್ಕೆ ತಾಪ ಕೊಡುವ ಕೆಟ್ಟ ವಾತಾವರಣವನ್ನು ಹೋಗಲಾಡಿಸುವ ಸುಂದರ ಧೂಪ, ಸೂರ್ಯನಂತಿರುವ ಪರಮ ತೇಜೋಮಯ ದೀಪವನ್ನು ನಿನಗೆ ಅರ್ಪಿಸುತ್ತಿರುವೆನು. ಕಮಲದಂತೆ ಕಣ್ಣುಗಳುಳ್ಳವನೇ, ಭಕ್ತಿಯಿಂದ ಅರ್ಪಿಸುತ್ತಿರುವ ಷಡ್ರಸಯುಕ್ತವಾದ ಪಕ್ವಾನ್ನಗಳ ನೈವೇದ್ಯವನ್ನು ನೀನು ಸ್ವೀಕರಿಸು. ॥ ೬ ॥

**ಮಧ್ಯೇ ಪಾನಮಿದಂ ಸುಶೀತಲಜಲಂ ವಾನೀರಗಂಧಾಭೃತಂ ।**
**ರಾಮ ಸ್ವೀಕುರು ಮತ್ಸಮರ್ಪಿತಮಿದಂ ಹಸ್ತೋದಕಂ ನಿರ್ಮಲಮ್ ॥**
**ತಾಂಬೂಲಂ ಸಫಲಂ ತ್ರಯೋದಶಗುಣಂ ಸ್ವಾತ್ಮೈಕರಾಗಾನ್ವಿತಂ ।**
**ಶ್ರದ್ಧಾರತ್ನ -ಸುವರ್ಣಪುಷ್ಪಸಹಿತಾಂ ಗೃಹ್ಣಾತು ತಾಂ ದಕ್ಷಿಣಾಮ್ ॥ ೭ ॥**

ಶ್ರೀರಾಮನೆ, ಸುಗಂಧಿತ ಬೇರಿನ ಶೀತಲ ಜಲವನ್ನು ಭೋಜನದ ಮಧ್ಯದಲ್ಲಿ ಸ್ವೀಕರಿಸು. ಕೈತೊಳೆಯಲು ಶುದ್ಧವಾದ ನೀರಿದೆ. ಆತ್ಮಸ್ವರೂಪಿ ಪ್ರೇಮಯುಕ್ತ ಹದಿಮೂರು ಗುಣಗಳುಳ್ಳ ತಾಂಬೂಲವಿದೆ. ದಕ್ಷಿಣೆಗಾಗಿ ಶ್ರದ್ಧಾರೂಪಿ ಸುವರ್ಣ ಪುಷ್ಪಗಳಿವೆ. ಇವೆಲ್ಲವನ್ನೂ ನೀನು ಸ್ವೀಕರಿಸು. ॥ ೭॥



— ಶ್ರೀ ಶಂಕರಾಚಾರ್ಯ

## ಸೂಕ್ತಿಪ್ರಭ

ಎಲೈ ವಿವೇಕಿಯಾದ ಶಿಷ್ಯನೆ, ವೈರಾಗ್ಯವೂ ಜ್ಞಾನವೂ — ಪಕ್ಷಿಗೆ ಹೇಗೋ ಹಾಗೆ — ಮನುಷ್ಯನ ಎರಡು ರೆಕ್ಕೆಗಳೆಂದು ತಿಳಿ. ಇವೆರಡರಲ್ಲಿ ಒಂದಿಲ್ಲದಿದ್ದರೂ ಮುಕ್ತಿಸೌಧದ ಮೇಲಕ್ಕೆ ಹತ್ತುವುದು ಸಾಧ್ಯವಾಗುವುದಿಲ್ಲ.

— ಶ್ರೀ ಶಂಕರಾಚಾರ್ಯ

ಮಾಡುವಂತಿರಬೇಕು, ಮಾಡದಂತಿರಬೇಕು;
ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು.
ಕೂಡಲಸಂಗಮದೇವರ ನೆನೆವುತ್ತ ನೆನೆವುತ್ತ
ನೆನೆಯದಂತಿರಬೇಕು.

— ಬಸವಣ್ಣ

ಪ್ರೀತಿಯಿಂದ ಸ್ಫೂರ್ತಿ ಪಡೆದ, ಹಾಗೂ ಅರಿವಿನಿಂದ ಮಾರ್ಗದರ್ಶನ ಪಡೆದ ಜೀವನವೇ ಅತ್ಯುತ್ತಮ ಜೀವನ.

— ಬರ್ಟ್ರೆಂಡ್ ರಸೆಲ್

ಎಲ್ಲ ಜೀವಿಗಳ ಮೇಲೆ ದಯೆ — ಇದೇ ನಿಜವಾದ ಧರ್ಮ. ಇತರ ಜೀವಿಗಳ ಬಗ್ಗೆ ನಿನ್ನ ಹೃದಯದಲ್ಲಿ ಅಪರಿಮಿತ ಸದ್ಭಾವವನ್ನು ಬೆಳೆಸು.

— ಭಗವಾನ್ ಬುದ್ಧ

ಕತ್ತಲು ಕತ್ತಲನ್ನು ತೊಲಗಿಸಲಾರದು; ಬೆಳಕೊಂದೇ ಆ ಕೆಲಸವನ್ನು ಮಾಡುವುದು. ದ್ವೇಷವು ದ್ವೇಷವನ್ನು ತೊಲಗಿಸದು, ಪ್ರೀತಿಯೊಂದೇ ಅದನ್ನು ತೊಲಗಿಸುವುದು.

— ಮಾರ್ಟಿನ್ ಲೂಥರ್ ಕಿಂಗ್ (ಜೂನಿಯರ್)

ಪ್ರೀತಿಯನ್ನು ಮರೆಯಬೇಡ; ಅದು ಹುಚ್ಚನ್ನು ತಂದೊಡ್ಡುವುದು. ಆ ಹುಚ್ಚಿನಿಂದ ಸಂಸಾರ ಸಾಗರವನ್ನು ದಾಟಿಸುವ ನಿನ್ನ ದೋಣಿಯ ಹಾಯಿ ತೆರೆಯುವುದು.

— ಮೀರಾಬಾಯಿ